**‘ಮಯೂರ’ದ 49 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ ‘ನವಿಲುಗರಿ’ಗಳನ್ನು ಒಂದೊಂದಾಗಿ ಆಯ್ದು ಈ ಅಂಕಣ ಓದುಗರ ಮುಂದಿಡುತ್ತದೆ. 1986ರ ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಕತೆ ಇಲ್ಲಿದೆ.**



## ಭಾಗ–ಒಂದು

ಮುಂಬಯಿ ಮಹಾನಗರದ ಉತ್ತರ ತುದಿಯ ಉಪನಗರಗಳಲ್ಲಿ ಒಂದಾದ ಬಾಂದ್ರದ ನೈರುತ್ಯ ಮೂಲೆಯಲ್ಲಿ ‘ಬ್ಯಾಂಡ್ ಸ್ಟ್ಯಾಂಡ್’ ಎಂಬ ಸುಂದರವಾದ ಜನವಸತಿಯಿದೆ. ಎರಡು ದಿಕ್ಕುಗಳಲ್ಲಿ ಅರಬೀ ಸಮುದ್ರದ ನೀರಿನಿಂದಲೂ ಇನ್ನೊಂದು ದಿಕ್ಕಿನಲ್ಲಿ ಮೌಂಟ್‌ಮೇರಿ ಗುಡ್ಡದಿಂದಲೂ ಸುತ್ತುವರಿಯಲ್ಪಟ್ಟ ಈ ಭೂಪ್ರದೇಶದ ಸೌಂದರ್ಯಕ್ಕೆ ನಿಜಕ್ಕೂ ಕಳೆ ತಂದದ್ದು ಮೇಲಿನ ನೀಲಿ ಆಕಾಶದಿಂದ ಇಳಿದುಬಂದು, ಬೆಳಗಿನಿಂದ ಸಂಜೆಯವರೆಗೆ ಹಲವು ಬಣ್ಣಗಳಿಗೆ ಬದಲಿಸುತ್ತಿದ್ದ ನೆಳಲು ಬೆಳಕುಗಳ ಚೇತೋಹಾರಿಯಾದ ವಿನ್ಯಾಸವೂ, ಈ ಬೆಳಕಿನಲ್ಲಿ ನಲಿಯುತ್ತ ಗುಡ್ಡದ ನೆತ್ತಿಯಲ್ಲಿ ನಿಂತ ಮೌಂಟ್‌ಮೇರಿ ಚರ್ಚಿನ ಶಿಲುಬೆ ಹೊತ್ತ ಗೋಪುರವೂ ಆಗಿದ್ದವು. ಸಮುದ್ರದಂಡೆಯ ಗುಂಟ ಹರಿದ ಡಾಂಬರು ರಸ್ತೆಗೆ ಹತ್ತಿರವಾಗಿ ಇತ್ತೀಚಿನ ವರ್ಷಗಳಲ್ಲಿ ಎದ್ದುಬಂದ ಹಲವಾರು ಸ್ಕಾಯ್ ಸ್ಕ್ರೇಪರ್ ಕಟ್ಟಡಗಳು ಬೆಳಕಿನ ವಿನ್ಯಾಸಕ್ಕೆ ಭಂಗತರುವ ಭಯ ಹುಟ್ಟಿಸುತ್ತಿವೆಯಾದರೂ ಕಣ್ಣು ಚಾಚುವವರೆಗೂ ಹಬ್ಬಿಕೊಂಡ ನೀರು ಮಾತ್ರ ಎಂದಿನ ಹಾಗೆಯೇ ತೆರೆ ಎಬ್ಬಿಸುತ್ತ ರಸ್ತೆಯ ಅಂಚಿನವರೆಗೂ ಹರಡಿಕೊಂಡ ಬಂಡೆಗಳಿಗೆ ಅಪ್ಪಳಿಸುತ್ತ ನೊರೆ ಕಾರುತ್ತಿತ್ತು.

ಒಂದು ದಿನ ಮಧ್ಯಾಹ್ನ, ಒಂದೂವರೆ ಎರಡು ಗಂಟೆಯ ಸುಮಾರಿಗೆ, ಈ ಸಮುದ್ರದಂಡೆಯ ಮೇಲಿನ 12 ಮಜಲು ಎತ್ತರವಾದ ಕಟ್ಟಡವೊಂದರ ಗೇಟಿನಲ್ಲಿ ಅಷ್ಟೇನೂ ಅದ್ಭುತವಲ್ಲದ ಘಟನೆಯೊಂದು ನಡೆಯಿತು. ಚಿಕ್ಕ ಪ್ರಾಯದ ಹುಡುಗನೊಬ್ಬ ಅಲ್ಲಿ ಕಾಣಿಸಿಕೊಂಡು ಕಟ್ಟಡದ ಪಹರೆ ಮಾಡುತ್ತಿದ್ದ ಚೌಕಿದಾರನನ್ನು ಸಮೀಪಿಸಿದಾಗ ಕಾಂಪೌಂಡಿನ ಒಳಗೇ ಬರದ ಹಾಗೆ ಚೌಕಿದಾರ ಅವನನ್ನು ತಡೆದ. ಹುಡುಗ ಯಾರದೋ ಹೆಸರು ಹೇಳಿ ಇಂಥವರು ಇಲ್ಲಿ ನಿಲ್ಲಲು